ಓ.ಎಸ್.ನಂ.5/2011
ಪಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 03.04.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 3, 7 ಮತ್ತು 8 ಪರ ಶ್ರೀ B.G.R.ವಕೀಲರಿಂದ.**

ವಿಲ್ ನನ್ನ ಬಳಿ ಇರುವುದಿಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ಅದು ಸುಳ್ಳು ಇರುತ್ತದೆಂದು ಹೇಳುತ್ತಾರೆ. ನನ್ನ ಹೆಂಡತಿ ಮರಣ ಹೊಂದಿದಾಗ 7 ನೇ ಪ್ರತಿವಾದಿ ಅವರಿಗೆ 15 ರಿಂದ 16 ವಯಸ್ಸಾಗಿತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ 8 ನೇ ಪ್ರತಿವಾದಿಗೆ 3 ತಿಂಗಳಿರುತ್ತದೆ. ನಿಮ್ಮ ಹೆಂಡತಿ ಕುಣಿಗಲ್ ಸರ್ಕಾರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ರಂಗಸ್ವಾಮಿ ಬೆಟ್ಟದಲ್ಲಿ ಮರಣ ಹೊಂದಿರುತ್ತಾರೆಂದು ಹೇಳುತ್ತಾರೆ. ವೈದ್ಯರು ಏನು ಮಾಡಲು ಆಗುವುದಿಲ್ಲ ನಿಮ್ಮ ಹೆಂಡತಿಯನ್ನು ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿದಕ್ಕೆ ನಾನು ಅವರನ್ನು ರಂಗನಾಥಸ್ವಾಮಿ ಬೆಟ್ಟಕ್ಕೆ ಕರೆದುಕೊಂಡು ಹೋಗಿದ್ದೇ ಎಂದರೆ ಸರಿ.

ನಿಮ್ಮ ಹೆಂಡತಿ ಮರಣ ಹೊಂದಿದಾಗ ಪ್ರತಿವಾದಿ 7 ಅವರಿಗೆ 2 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ರ ನಡುವೆ 4 ವರ್ಷಗಳ ಅಂತರ ಇರಬಹುದೆಂದು ಹೇಳುತ್ತಾರೆ. ನಿಮ್ಮ ಹೆಂಡತಿ ಕುಣಿಗಲ್ ಸರ್ಕಾರಿ ಆಸ್ಪತ್ರೆಯಲ್ಲಿದ್ದಾಗ ಪ್ರತಿವಾದಿ 3 ಅವರ ಮಗ ರಾಜಣ್ಣ ಸಹ ಆಸ್ಪತ್ರೆಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಹೆಂಡತಿ ಪ್ರತಿವಾದಿ 8 ಅವರನ್ನು ರಾಜಣ್ಣ ಅವರ ಕೈಗೆ ಇಟ್ಟು ನೀವೇ ಅವರನ್ನು ನೋಡಿಕೊಳ್ಳಬೇಕೆಂದು ಹೇಳಿದ್ದರು ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ನಾವೇ ಅವರನ್ನು ಸಾಕಿರುತ್ತವೆಂದು ಹೇಳುತ್ತಾರೆ.

ಪ್ರತಿವಾದಿ 7 ಮತ್ತು 8 ಅವರನ್ನು ಪ್ರತಿವಾದಿ 3 ಅವರೇ ಕರೆದುಕೊಂಡು ಹೋಗಿ ಅವರನ್ನು ಸಾಕಿ ಸಲಹಿ ನಂತರ ಅವರ ಮದುವೆಯನ್ನು ಸಹ ಅವರೇ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಅವರ ಮದುವೆಯನ್ನು ಮಾಡಿರುತ್ತೇನೆಂದು ಹೇಳುತ್ತಾರೆ. ಪ್ರತಿವಾದಿ 8 ಅವರು ಆಡೋನಹಳ್ಳಿಯನ್ನು ಯಾವತ್ತಿಗೂ ಸಹ ನೋಡಿಲ್ಲವೆಂದರೆ ಸಾಕ್ಷಿ ನಾನೇ ಕರೆದುಕೊಂಡು ಬಂದಿದ್ದು ಅವರು ನಮ್ಮ ಊರಿನಲ್ಲಿಯೇ ಇದ್ದರು ಎಂದು ಹೇಳುತ್ತಾರೆ.

ಪ್ರತಿವಾದಿ 7 ಮತ್ತು 8 ಆಡೋನಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುವುದಿಲ್ಲವೆಂದರೆ ಸಾಕ್ಷಿ ಮೊದಲು ಮಾಡಿಲ್ಲವೆಂದು ಹೇಳಿ ನಂತರ ಪ್ರತಿವಾದಿ 7 ವಿದ್ಯಾಭ್ಯಾಸ ಮಾಡಿರಬೇಕು ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಪ್ರತಿವಾದಿ 7 ಮತ್ತು 8 ಅವರು ಪ್ರತಿವಾದಿ 3 ಅವರ ಊರಾದ ಅಂಚೆಪಾಳ್ಯ ಮತ್ತು ಯಲಿಯೂರುನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ಅವರು ಈಗಲೂ ಸಹ ಅವರ ತವರು ಮನೆಯೆಂದು ಅಂಚೆಪಾಳ್ಯದ ಪ್ರತಿವಾದಿ 3 ಅವರ ಮನೆಗೆ ಬಂದು ಹೋಗಿ ಮಾಡುತ್ತಿದ್ದು ಆಡೋನಹಳ್ಳಿಗೆ ಬಂದಿಲ್ಲವೆಂದರೆ ಸಾಕ್ಷಿ ಮದುವೆಯ ನಂತರ ನಮ್ಮ ಊರಿಗೆ ಬಂದಿಲ್ಲವೆಂದು ಹೇಳುತ್ತಾರೆ.

ನಾನು ಪ್ರತಿವಾದಿ 7 ಮತ್ತು 8 ಅವರ ಮದುವೆಯನ್ನು ಮಾಡಿಲ್ಲ ಪ್ರತಿವಾದಿ 3 ಅವರೇ ಅವರ ಮದುವೆಯನ್ನು ಮಾಡಿರುತ್ತಾರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ ಪ್ರತಿವಾದಿ 7 ಮತ್ತು 8 ಅವರ ಯೋಗಕ್ಷೇಮವನ್ನು ಪ್ರತಿವಾದಿ 3 ಅವರೇ ನೋಡಿಕೊಳುತ್ತಿದ್ದಾರೆ ಎಂದರೆ ಸಾಕ್ಷಿ ಅವರು ಅವರವರ ಮನೆಯಲ್ಲಿದ್ದಾರೆಂದು ಹೇಳುತ್ತಾರೆ. ನಾನು ಪ್ರತಿವಾದಿ 7 ಮತ್ತು 8 ಅವರ ಮನೆಗೆ ಹೋಗಿರುತ್ತೇನೆ.

ಸಿದ್ದಲಿಂಗಯ್ಯ ಅವರು ವಿಲ್ ಅನ್ನು ಬರೆದಾಗ ಪ್ರತಿವಾದಿ 7 ಮತ್ತು 8 ಅವರಿಗೆ ಆಸ್ತಿ ನೀಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ಜೀವಂತ ಇಲ್ಲದೆ ಇರುವ ಕಾರಣ ಪ್ರತಿವಾದಿ 7 ಮತ್ತು 8 ಅವರಿಗೆ ಸಿದ್ದಲಿಂಗಯ್ಯ ಅವರು ಆಸ್ತಿಯನ್ನು ವಿಲ್ ನಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ಅವರನ್ನು ನಾನು ಅವರ ತಾತ ಆಸ್ತಿ ಕೊಟ್ಟಿರುವ ಬಗ್ಗೆ ಕೇಳಿರುವುದಿಲ್ಲ.

ಸರ್ವೆ ನಂ 104/2ಎ ರಲ್ಲಿ ಪ್ರತಿವಾದಿ 7 ಮತ್ತು 8 ಅವರಿಗೆ ಅವರ ತಾತ ಆಸ್ತಿ ನೀಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ಅವರಿಗೆ ಸಿದ್ದಲಿಂಗಯ್ಯ ಅವರು ನೀಡಿರುವ ಆಸ್ತಿ **ರಾಷ್ಟ್ರೀಯ** ಹೆದ್ದಾರಿ ಅಗಲಿಕರಣದ ಸಮಯದಲ್ಲಿ ಭೂ ಸ್ವಾಧೀನ ಆಗಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿ 7 ಅವರು **ರಾಷ್ಟ್ರೀಯ** ಹೆದ್ದಾರಿ ಅಗಲೀಕರಣದ ಸಮಯದಲ್ಲಿ ಅವರ ಜಮೀನು ಹೋದ ಕಾರಣ ಪರಿಹಾರವಾಗಿ **ರಾಷ್ಟ್ರೀಯ** ಹೆದ್ದಾರಿ ಪ್ರಾಧಿಕಾರದಿಂದ 53460/- ರೂ. ಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 8 ಅವರಿಗೆ ನೀಡಿದ ಆಸ್ತಿಗಳಲ್ಲಿ ಅಂಗಡಿಗಳು ಇದ್ದವು ಎಂದರೆ ಸಾಕ್ಷಿ ಆಗ ಇರಲಿಲ್ಲವೆಂದು ಹೇಳುತ್ತಾರೆ. ಅಂಗಡಿಗಳು ಇದ್ದ ಕಾರಣ ಪ್ರತಿವಾದಿ 8 ಅವರಿಗೆ **ರಾಷ್ಟ್ರೀಯ** ಹೆದ್ದಾರಿ ಅಗಲೀಕರಣದ ಸಮಯದಲ್ಲಿ ಅವರ ಜಮೀನು ಹೋದ ಕಾರಣ ಪರಿಹಾರವಾಗಿ **ರಾಷ್ಟ್ರೀಯ** ಹೆದ್ದಾರಿ ಪ್ರಾಧಿಕಾರದಿಂದ 2,24,888/- ರೂ. ಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ವಿಷಯ ಗೊತ್ತಿದ್ದರು ಸಹ ನಾನು ಆಸ್ತಿಯನ್ನು ಖಬಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 104/2 ಎ ನಲ್ಲಿ ಭೂ ಸ್ವಾಧೀನ ಆಗುವ ಮೊದಲು ಎಷ್ಟು ಜಮೀನು ಇತ್ತು ಎಂದರೆ ಸಾಕ್ಷಿ ನೆನಪಿಲ್ಲವೆಂದು ಹೇಳುತ್ತಾರೆ. ಸರ್ವೆ ನಂ 104/2 ಎ ನಲ್ಲಿ **ರಾಷ್ಟ್ರೀಯ** ಹೆದ್ದಾರಿಗೆ ಭೂ ಸ್ವಾದೀನವಾದ ಜಮೀನನ್ನು ಸಹ ಸೇರಿಸಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ 5 ಎಕರೆ 13 ಗುಂಟೆ ಪೈಕಿ **ರಾಷ್ಟ್ರೀಯ** ಹೆದ್ದಾರಿಗೆ ಭೂ ಸ್ವಾಧೀನವಾದ ಜಮೀನು ಕಳೆದಿದ್ದವೆಂದರೆ ಸರಿಯಲ್ಲ.

ಸಿದ್ದಲಿಂಗಯ್ಯ ಅವರು ತಮ್ಮ ಜೀವಿತ ಅವಧಿಯಲ್ಲಿ ಪ್ರತಿವಾದಿ 3 ಅವರ ಮನೆಯಲ್ಲಿದ್ದರು ಎಂದರೆ ಸಾಕ್ಷಿ ತಮ್ಮ ಮನೆಯಲ್ಲಿಯೇ ಇದ್ದರು ಎಂದು ಹೇಳುತ್ತಾರೆ. ಪ್ರತಿವಾದಿ 3 ಅವರೇ ಸಿದ್ದಲಿಂಗಯ್ಯ ಅವರು ಮರಣ ಹೊಂದುವವರೆಗೆ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಎಲ್ಲಾ ಹೆಣ್ಣು ಮಕ್ಕಳು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಸಿದ್ದಲಿಂಗಯ್ಯ ಅವರು ಜೀವಿತ ಅವಧಿಯಲ್ಲಿ ಪ್ರತಿವಾದಿ 3 ಮತ್ತು ಅವರ ಗಂಡ ಹಾಗೂ ಮಕ್ಕಳು ಸಿದ್ದಲಿಂಗಯ್ಯ ಅವರು ಜಮೀನು ನೋಡಿಕೊಳ್ಳಲು ಸಹಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾವು ಮಾಡುತ್ತಿದ್ದೇವು ಎಂದು ಹೇಳುತ್ತಾರೆ.

ಸರ್ವೆ ನಂ 104/2 ಎ ನಲ್ಲಿ ಸಿದ್ದಲಿಂಗಯ್ಯ ಅವರು ವಿಲ್ ನ ಮೂಲಕ ಎಲ್ಲಾ ಹೆಣ್ಣು ಮಕ್ಕಳಿಗೆ ತಲಾ 6 ಗುಂಟೆಯಂತೆ ಜಮೀನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ಅವರಿಗೆ ಅವರ ತಾಯಿ ಜೀವಂತ ಇಲ್ಲದ ಕಾರಣ ತಲಾ ಮೂರು ಮೂರು ಗುಂಟೆಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ವಿಲ್ ಮಾಡಿರುವ ವಿಚಾರ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ದಾವಾ ಐ ಟಂ ನಂ 1, 2 ಮತ್ತು 8 ಸ್ವತ್ತುಗಳು ಸಹ **ರಾಷ್ಟ್ರೀಯ** ಹೆದ್ದಾರಿಗೆ ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. **ರಾಷ್ಟ್ರೀಯ** ಹೆದ್ದಾರಿಗೆ ಭೂ ಸ್ವಾಧೀನವಾದ ಜಮೀನಿನ ಪರಿಹಾರ ಹಣವನ್ನು ಪ್ರತಿವಾದಿ 6 ಅವರನ್ನು ಹೊರತುಪಡಿಸಿ ಎಲ್ಲಾ ಹೆಣ್ಣು ಮಕ್ಕಳು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ವಿಲ್ ನಲ್ಲಿ 3 ನೇ ಪ್ರತಿವಾದಿಗೆ ಯಾವ ಯಾವ ಆಸ್ತಿಗಳನ್ನು ನೀಡಿದ್ದಾರೆಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಎಲ್ಲಾ ಆಸ್ತಿಗಳನ್ನು ನೀಡಿದ್ದಾರೆಂದು ಹೇಳುತ್ತಾರೆ. ವಿಲ್ ನ ಅಡಿಯಲ್ಲಿ ಸಿದ್ದಲಿಂಗಯ್ಯ ಅವರು ನೀಡಿರುವ ಎಲ್ಲಾ ಆಸ್ತಿಗಳನ್ನು ಅವರ ಹೆಣ್ಣು ಮಕ್ಕಳು ಕಂದಾಯ ಅಧಿಕಾರಿಗಳಿಗೆ ಅರ್ಜಿ ನೀಡಿ ತಮ್ಮಗಳ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ಅವರಿಗೆ ವಿಲ್ ನಲ್ಲಿ ನೀಡಿದ ಆಸ್ತಿಯನ್ನು ಅವರು ಅಭಿವೃದ್ಧಿ ಪಡಿಸಿ ತೋಟ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಾನು ತೋಟ ಮಾಡಿರುತ್ತೇನೆಂದು ಹೇಳುತ್ತಾರೆ.

ದಾವಾ ಐ ಟಂ ನಂ 8 ರಲ್ಲಿ ಯಾವುದೇ ಮಾವಿನಮರಗಳು ಇರುವುದಿಲ್ಲ ಮಾವಿನಮರಗಳು ಇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ವಿಲ್ ಅನ್ನು ಮೋಸ ಮಾಡಿ ಬರೆಸಿಕೊಂಡಿರುತ್ತಾರೆಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಸಿದ್ದಲಿಂಗಯ್ಯ ಅವರು ಸ್ವ ಇಚ್ಚೆ ವಿಲ್ ಅನ್ನು ಬರೆದಿದ್ದು ಅವರ ಸ್ವ ಇಚ್ಚೆಯಿಂದ ವಿಲ್ ಅನ್ನು ಬರೆದಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿದ್ದಲಿಂಗಯ್ಯ ಅವರು ಅವರ ಜ್ಞಾನ, ಬುದ್ದಿ ಮತ್ತು ಕಣ್ಣು ಸರಿಯಾಗಿದ್ದಾಗಲೇ ವಿಲ್ ಅನ್ನು ಬರೆದಿರುತ್ತಾರೆಂದರೆ ಸಾಕ್ಷಿ ಖಾತೆ ಪಹಣಿ ಮಾಡಿಸುತ್ತೇವೆಂದು ಹೇಳಿ ಬರೆಸಿಕೊಂಡಿರುತ್ತಾರೆಂದು ಹೇಳುತ್ತಾರೆ. ವಿಲ್ ಅನ್ನು ಮಾಡಿದಾಗ ದಾವಾ ಸ್ವತ್ತುಗಳ ಖಾತೆ ಪಹಣಿ ಸಿದ್ದಲಿಂಗಯ್ಯ ಅವರ ಹೆಸರಿಗೆ ಇತ್ತು. ವಿಲ್ ಆದ 8 ವರ್ಷಗಳ ಬಳಿಕ ಸಿದ್ದಲಿಂಗಯ್ಯ ಅವರು ಮರಣ ಹೊಂದಿರುತ್ತಾರೆ ಎಂದರೆ ಸರಿ.

ದಾವಾ ಐ ಟಂ ನಂ 8 ರಲ್ಲಿ ಕಲ್ಲು ಗುಡ್ಡೆಗಳು ಇದ್ದು ವ್ಯವಸಾಯ ಮಾಡಲು ಆಗುತ್ತಿರಲಿಲ್ಲವೆಂದರೆ ಸಾಕ್ಷಿ ಕಲ್ಲು ಗುಡ್ಡೆಗಳು ಇದ್ದು ವ್ಯವಸಾಯ ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ಪ್ರತಿವಾದಿ 5 ಅವರು ದಾವಾ ಐಟಂನಂ 6 ಸ್ವತ್ತಿನಲ್ಲಿ ಅನುಭವದಲ್ಲಿದ್ದು ಉಳುಮೆ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಸಿದ್ದಲಿಂಗಯ್ಯ ಅವರು ವಿಲ್ ಮಾಡಿದಾಗ ಪ್ರತಿವಾದಿ 5 ಅವರಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಖಬಳಿಸುವ ಉದ್ದೇಶದಿಂದ ಈ ದಾವೆಯಲ್ಲಿ ಸೇರಿಸಿದ್ದೇನೆಂದೆರ ಸಾಕ್ಷಿ ಎಲ್ಲಾ ಆಸ್ತಿಗಳಲ್ಲಿ ಭಾಗ ಬೇಕೆಂದು ಸೇರಿಸಿದ್ದೇನೆಂದು ಹೇಳುತ್ತಾರೆ.

ಸರ್ವೆ ನಂ 104/2 ಬಿ ಜಮೀನು ನನ್ನ ಅತ್ತೆ ರಂಗಮ್ಮಾ ಅವರಿಗೆ ಸೇರಿದ ಆಸ್ತಿಎಂದರೆ ಸಾಕ್ಷಿ ಸಿದ್ದಲಿಂಗಯ್ಯ ಅವರ ಆಸ್ತಿ ಆಗಿರುತ್ತದೆಂದು ಹೇಳುತ್ತಾರೆ. ನಾನು ಕಂಡ ಹಾಗೆ ರಂಗಮ್ಮಾ ಅವರು ನಾನು ಹೋಗಿ ಬಂದು ಮಾಡುತ್ತಿದ್ದಾಗ ಅಳಿಯ ಬಂದಿದ್ದಾನೆಂದು ಚನ್ನಾಗಿ ಮಾತನಾಡುತ್ತಿದ್ದರು ಎಂದರೆ ಸರಿ. ನಾನು ಅವರು ಮರಣ ಹೊಂದುವವರೆಗೂ ಹೋಗಿ ಬಂದು ಮಾಡುತ್ತಿದ್ದೇ ಮತ್ತು ಚನ್ನಾಗಿ ಮಾತನಾಡಿಸುತ್ತಿದ್ದೇ ಎಂದರೆ ಸರಿ. ಅವರು ಮರಣ ಹೊಂದುವವರೆಗೆ ನನ್ನನ್ನು ಚನ್ನಾಗಿ ಮಾತನಾಡಿಸಿ ಊಟ ತಿಂಡಿ ಕೊಟ್ಟು ಯೋಗಕ್ಷೇಮವನ್ನು ವಿಚಾರಿಸುತ್ತಿದ್ದೆರು ಎಂದರೆ ಸರಿ. ದಾವಾ ಐ ಟಂ ನಂ 2 ರ ಪಹಣಿ ಪತ್ರಿಕೆ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಮೊದಲು ಗೊತ್ತಿಲ್ಲವೆಂದು ಹೇಳಿ ನಂತರ ಸಿದ್ದಲಿಂಗಯ್ಯ ಅವರ ಹೆಸರಿಗೆ ಇತ್ತು ಎಂದು ಹೇಳುತ್ತಾರೆ.

ದಾವಾ ಐ ಟಂ ನಂ 2 ರಲ್ಲಿ 2 ಎಕರೆ ಜಮೀನು ನನ್ನ ಅತ್ತೆ ರಂಗಮ್ಮಾ ಅವರು ದಿಃ 19.11.1996 ರಲ್ಲಿ ಪ್ರತಿವಾದಿ 3 ಅವರಿಗೆ ವಿಲ್ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಕಂಡ ಹಾಗೆ ರಂಗಮ್ಮಾ ಅವರು ಅವರು ಮರಣ ಹೊಂದುವವರೆಗೆ ಚನ್ನಾಗಿ ಓಡಾಡಿಕೊಂಡು ಇದ್ದರು ಎಂದರೆ ಸರಿ. ರಂಗಮ್ಮಾ ಅವರು ವಿಲ್ ಮಾಡಿ 10 ವರ್ಷಗಳ ಬಳಿಕ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಸಿದ್ದಲಿಂಗಯ್ಯ ಅವರ ಜಮೀನನ್ನು ಅವರು ಹೇಗೆ ವಿಲ್ ಮಾಡುತ್ತಾರೆಂದು ಹೇಳುತ್ತಾರೆ.

1996 ರಲ್ಲಿ ನನ್ನ ಅತ್ತೆಯ ಕಣ್ಣಿನ ದೃಷ್ಟಿ, ಆರೋಗ್ಯ ಚನ್ನಾಗಿ ಇತ್ತು ಎಂದರೆ ಸಾಕ್ಷಿ ಇರಲಿಲ್ಲವೆಂದು ಹೇಳುತ್ತಾರೆ. ಅವರು ಮರಣ ಹೊಂದುವವರೆಗೆ ರಂಗಮ್ಮಾ ಅವರು ಯೋಗಕ್ಷೇಮವನ್ನು ಪ್ರತಿವಾದಿ 3 ಅವರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಎಲ್ಲಾ ಹೆಣ್ಣುಮಕ್ಕಳು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನಾನು ತಾಯಮ್ಮಾ ಅವರನ್ನು ಮದುವೆ ಆದಾಗಿನಿಂದ ರಂಗಮ್ಮಾ ಅವರು ಮರಣ ಹೊಂದುವವರೆಗೆ ಅಂಚೆಪಾಳ್ಯದಲ್ಲಿ ವಾಸ ಮಾಡುತ್ತಿದ್ದರು. ವಿಲ್ ಅನ್ನು ಮಾಡಿಕೊಟ್ಟ ಬಳಿಕ ಪ್ರತಿವಾದಿ 3 ಅವರು ತಮ್ಮ ಹೆಸರಿಗೆ ಖಾತೆ ಪಹಣಿ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ.

ಪ್ರತಿವಾದಿ 3 ಅವರು ಗೊತ್ತಿಲ್ಲದಂತೆ ಖಾತೆ ಪಹಣಿ ಮಾಡಿಕೊಂಡಿರುವ ವಿಚಾರ ಭಾಗ ಕೇಳಲು ಹೋದಾಗ ಸುಮಾರು 10 ವರ್ಷಗಳ ಹಿಂದೆ ನನಗೆ ಗೊತ್ತಾಗಿರುತ್ತದೆಂದು ಹೇಳುತ್ತಾರೆ. ಖಾತೆ ಪಹಣಿಯನ್ನು ಪ್ರಶ್ನೇ ಮಾಡಿ ಮೇಲ್ಮವಿನ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಈ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇನೆಂದು ಹೇಳುತ್ತಾರೆ. ಸಿದ್ದಲಿಂಗಯ್ಯ ಅವರು ಮಾಡಿರು ವಿಲ್ ನ ಆದಾರದ ಮೇರೆಗೆ ಅವರು ಹೆಣ್ಣು ಮಕ್ಕಳು ಮತ್ತು ನನ್ನ ಮಕ್ಕಳು ಖಾತೆ ಪಹಣಿ ಮಾಡಿಕೊಂಡಿ ವಿಚಾರ ಭಾಗ ಕೇಳಲು ಹೋದಾಗ 15 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಖಾತೆ ಪಹಣಿಯನ್ನು ಸಹ ನಾನು ಪ್ರಶ್ನೆ ಮಾಡಿರುವುದಿಲ್ಲ.

ದಾವಾ ಐಟಂ ನಂ 2 ರ 2 ಎಕರೆ ಜಮೀನು ರಂಗಮ್ಮಾ ಅವರಿಗೆ ಸೇರಿದ ಆಸ್ತಿ ಅದನ್ನು ಪ್ರತಿವಾದಿ 3 ಅವರಿಗೆ ವಿಲ್ ಮಾಡಿರುವ ವಿಚಾರ ಗೊತ್ತಿದ್ದರು ಸಹ ಅದನ್ನು ಸಹ ಸೇರಿಸಿ ಖಬಳಿಸುವ ಉದ್ದೇಶದಿಂದ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸಿದ್ದಲಿಂಗಯ್ಯ ಮತ್ತು ರಂಗಮ್ಮಾ ಅವರಿಗೆ ಗಂಡು ಮಕ್ಕಳು ಇಲ್ಲದೇ ಇರುವ ಕಾರಣ ಪ್ರತಿವಾದಿ 3 ಅವರೇ ಅವರ ಯೋಗಕ್ಷೇಮವನ್ನು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಎಲ್ಲಾ ಹೆಣ್ಣು ಮಕ್ಕಳು ನೋಡಿಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ.

ಸಿದ್ದಲಿಂಗಯ್ಯ ಮತ್ತು ರಂಗಮ್ಮಾ ಅವರಿಗೆ ಗಂಡು ಮಕ್ಕಳು ಇಲ್ಲದೇ ಇರುವ ಕಾರಣ ಪ್ರತಿವಾದಿ 3 ಅವರ ಮಕ್ಕಳು ಅವರ ಅಂತಿಮ ಸಂಸ್ಕಾರ ಮತ್ತು ಅಂತ್ಯಕ್ರಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವೆ ದಾಖಲು ಮಾಡುವ 3-4 ವರ್ಷಗಳ ಹಿಂದೆ ಸಿದ್ದಲಿಂಗಯ್ಯ ಅವರು ಮಕ್ಕಳು ಮತ್ತು ನನ್ನ ಮಕ್ಕಳು ವಿಲ್ ನ ಆದಾರದ ಮೇರೆಗೆ ಅವರವರ ಹೆಸರಿಗೆ ಖಾತೆ ಪಹಣಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ವಿಲ್ ಮಾಡಿರುವ ವಿಚಾರ ನನಗೆ ಗೊತ್ತಿಲಿಲ್ಲ ಭಾಗ ಕೇಳಲು ಹೋದಾಗ ಗೊತ್ತಾಗಿರುತ್ತದೆಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್